ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.74 - 81
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಕಾಗೋಡು ರೈತ ಚಳುವಳಿಯಲ್ಲಿ ಭಾಗವಹಿಸಿದ ರೈತ ಮಹಿಳಾ ಹೋರಾಟಗಾರರು

ದಿನೇಶ.ಎನ್.ಎನ್.[1] ಮತ್ತು ಪ್ರೊ.ಕೆ.ಆರ್.ಶಾನಿ.[2]

[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

Abstract:

ಭಾರತದ ಕೃಷಿ ಅಭಿವೃದ್ಧಿಯಲ್ಲಿ ಮಹಿಳೆ ಪ್ರಮುಖ ಪಾತ್ರವಹಿಸತ್ತಾಳೆ. ಹೆಣ್ಣು ವ್ಯವಸಾಯದ ತಾಯಿ ಎಂಬ ಮಾತು ರೂಢಿಯಲ್ಲಿದೆ. ಸ್ತ್ರೀಯರು ನೆಲ ಸಂಬಂಧಿ ಕೆಲಸಗಳಲ್ಲಿ ತೊಡಗಿದ್ದರಲ್ಲಿ ಮೊದಲಿಗರಾಗಿದ್ದ ಕಾರಣ ಅವರೇ ಅತ್ಯಂತ ಪ್ರಾಚೀನ ರೈತರು. ಹೆಣ್ಣು ಭೂಮಿಯ ಸೃಷ್ಟಿಶೀಲತೆಯ ಸಂಕೇತ, ಅವಳು ಮನೆಯ ಕೌಟುಂಬಿಕ ಬದುಕನ್ನು ನಿರ್ವಹಿಸುವುದು, ಕೃಷಿಯ ಅಗತ್ಯತೆಗಳನ್ನು ಪೂರೈಸುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿ ಅದರಂತೆ ನಡೆಯುತ್ತಾ ಬಂದಿದ್ದಾಳೆ. ಹೀಗಾಗಿ ಕೃಷಿಗೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಆಕೆ ಜವಾಬ್ದಾರಿಯುತವಾಗಿ ನಡೆಸಿಕೊಂಡು ಬಂದಿದ್ದಾಳೆ. ಕಾಗೋಡು ರೈತ ಚಳುವಳಿಯಲ್ಲಿ ಷವಾಜಿ ಮಾಸ್ತ್ಯಮ್ಮ, ಬಿಳಿಯನ ಸಾವಿತ್ರಮ್ಮಾ, ಕೋಣೆ ಕನ್ನಮ್ಮ, ಮಡಿವಾಳ ಕನ್ನಮ್ಮ, ಬರ್ಲ್ಲಿನ ಚೌಡಮ್ಮ, ಕೆಂಚನ ಬೀರಮ್ಮ ಮತ್ತು ಕೆಂಚಪ್ಪ, ರೊಡ್ಡಿ ದೇವಮ್ಮನವರು ಕಾಗೋಡು ರೈತ ಮಹಿಳಾ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದಾರೆ. ರೈತರ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಡುವ ರೈತ ಸಂಘಟನೆಗಳಲ್ಲಿ ರೈತ ಮಹಿಳೆಯರು ಕೈ ಜೋಡಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ರೈತಾಪಿ ವರ್ಗದ ಬದುಕು ಹಸನಾದರೆ ರೈತ ಮತ್ತು ಗ್ರಾಮೀಣ ಮಹಿಳೆಯರ ಬದುಕು ಹಸನಾಗುತ್ತದೆ. ತನ್ಮೂಲಕ ಗ್ರಾಮೀಣ ಸ್ವರಾಜ್ಯದಿಂದ ಗ್ರಾಮ ಮಹಿಳೆಯ ಅರ್ಥಾತ್ ರೈತ ಮಹಿಳೆಯ ಬದುಕು ಅರ್ಥಪೂರ್ಣವಾಗಬೇಕಾಗಿದೆ. ಆದ್ದರಿಂದ ಈ ಲೇಖನವು ಕಾಗೋಡು ರೈತ ಚಳುವಳಿಯಲ್ಲಿ ಭಾಗವಹಿಸಿದ ರೈತ ಮಹಿಳಾ ಹೋರಾಟಗಾರರ ಕುರಿತು ಚರ್ಚಿಸುತ್ತದೆ.

Keywords: *ಕಾಗೋಡು ರೈತ ಚಳುವಳಿ, ರೈತರು, ಮಹಿಳಾ ಹೋರಾಟಗಾರರು, ಷವಾಜಿ ಮಾಸ್ತ್ಯಮ್ಮ.*

ಪೀಠಿಕೆ

ಪುರಾತನ ಸಮಾಜದಲ್ಲಿ ಬೇಟೆಯಾಡುವುದು ಶೌರ್ಯದ ಕೆಲಸ, ನೆಲದೊಳಗಿನ ಗೆಡ್ಡೆಗೆಣಸುಗಳನ್ನು ಆಯುವುದು ನಿಕೃಷ್ಟದ ಕೆಲಸ ಎಂದು ಬಗೆದ ಪುರುಷ ಅದನ್ನು ಮಹಿಳೆಯ ಪಾಲಿಗೆ ಬಿಟ್ಟ. ಇದರಿಂದ ಆಕೆ ದೇಹಕ್ಕೆ ಹೊಂದಿಕೊಳ್ಳುವ ಆಹಾರದ ಮೂಲಗಳು ಯಾವುವೆಂಬುದನ್ನು ಕಂಡುಕೊಂಡಳು. ಅವುಗಳಲ್ಲಿ ಒಗ್ಗಿದಂತಹ ಕೆಲವು ಮೂಲಗಳನ್ನು ತಾನು ನೆಲೆಸಿದ ಸ್ಥಳದಲ್ಲಿಯೇ ಬೆಳೆಯಲು ಪ್ರಯತ್ನಿಸಿ ಪ್ರಥಮ ತೋಟಗಾರಳೂ, ಕೃಷಿಕಳೂ ಆದಳೆಂಬುದು ಖ್ಯಾತ ಇತಿಹಾಸಕಾರರಾದ 'ಕೊಸಾಂಬಿ'ಯವರ ಅಭಿಪ್ರಾಯವಾಗಿದೆ.[1] ಇದು ಮುಂದೆ ತುತ್ತಿನ ಚೀಲ ತುಂಬಿಸುವ ಬೆಳೆಗಳ ಆವಿಷ್ಕಾರಕ್ಕೆ ನಾಂದಿಯಾಯಿತು.

[1] ನಾಗರಾಜ್.ಎಂ.ಜಿ. (2006). *ಕರ್ನಾಟಕ ರೈತ ಚಳುವಳಿಗಳು–ಸತ್ಯಾಗ್ರಹಗಳು.* ಪು.ಸಂ. 10.

Please cite this article as: ದಿನೇಶ.ಎನ್.ಎನ್. ಮತ್ತು ಕೆ.ಆರ್.ಶಾನಿ. (2024). ಕಾಗೋಡು ರೈತ ಚಳುವಳಿಯಲ್ಲಿ ಭಾಗವಹಿಸಿದ ರೈತ ಮಹಿಳಾ ಹೋರಾಟಗಾರರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 74–81.

ಈ ಎಲ್ಲದರಿಂದಾಗಿಯೇ ಹೆಣ್ಣು ವ್ಯವಸಾಯದ ತಾಯಿ ಎಂಬ ಮಾತು ರೂಢಿಯಲ್ಲಿದೆ. ಸ್ತ್ರೀಯರು ನೆಲಸಂಬಂಧಿ ಕೆಲಸಗಳಲ್ಲಿ ತೊಡಗಿದ್ದ ಮೊದಲಿಗರಾಗಿದ್ದ ಕಾರಣ ಅವರೇ ಅತ್ಯಂತ ಪ್ರಾಚೀನ ರೈತರು ಎಂದು 'ಲೌಟಿ' ಎಂಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[2]

ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಕೃಷಿಗೂ ಮಹಿಳೆಗೂ ಇರುವ ನಿಕಟವಾದ ಸಂಬಂಧ ನಮಗೆ ಕಾಣುತ್ತದೆ. ಹೆಣ್ಣು ಭೂಮಿಯ ಸೃಷ್ಟಿಶೀಲತೆಯ ಸಂಕೇತ, ಅವಳು ಮನೆಯ ಕೌಟುಂಬಿಕ ಬದುಕನ್ನು ನಿರ್ವಹಿಸುವುದು, ಕೃಷಿಯ ಅಗತ್ಯತೆಗಳನ್ನು ಪೂರೈಸುವುದು ತನ್ನ ಅದ್ಯ ಕರ್ತವ್ಯವೆಂದು ಭಾವಿಸಿ ಅದರಂತೆ ನಡೆಯುತ್ತಾ ಬಂದಿದ್ದಾಳೆ. ಹೀಗಾಗಿ ಕೃಷಿಗೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಆಕೆ ಜವಾಬ್ದಾರಿಯುತವಾಗಿ ನಡೆಸಿಕೊಂಡು ಬಂದಿದ್ದಾಳೆ. ಆದರೆ ಕಾಲಕ್ರಮೇಣದಲ್ಲಿ ಕೃಷಿ ಕ್ಷೇತ್ರ ಕೌಟುಂಬಿಕ ಅಗತ್ಯದಿಂದ ಸಾಮಾಜಿಕ ಅಗತ್ಯಕ್ಕೆ ವಿಸ್ತರಿಸಿಕೊಂಡಾಗ ಹೆಣ್ಣು ಒಳಗಿನ ಜವಾಬ್ದಾರಿಗಳಿಗೆ ಮೀಸಲಾದ ಕಾರಣದಿಂದ ಕ್ರಮೇಣ ಆಕೆ ಕೃಷಿ ಕ್ಷೇತ್ರದ ಜವಾಬ್ದಾರಿ ನಿರ್ವಹಣೆ ಕಾರ್ಯದಿಂದ ಹಿಂದೆ ಸರಿಯಬೇಕಾಯಿತು. ಕೃಷಿ ವ್ಯವಹಾರಿಕ ಸ್ವರೂಪ ಪಡೆಯುತ್ತಾ ಬಂದಿದ್ದು ಈ ಬದಲಾವಣೆಗೆ ಕಾರಣವಾಗಿದೆ. ಪುರುಷ ಭೂಮಿಯ ಮೇಲೆ ಒಡೆತನ ಸ್ಥಾಪಿಸಿಕೊಂಡು ಕೃಷಿ ಒಂದು ಉದ್ಯಮದ ಸ್ವರೂಪ ಪಡೆದ ಮೇಲೆ ಜಮೀನ್ದಾರರು, ಭೂಮಾಲೀಕರು ಭೂಮಿಯ ಮೇಲೆ ಸ್ವಾಮ್ಯ ಸಾಧಿಸಿದರು. ಕೈಗಾರೀಕರಣ ಎಂಬುವುದು ಭೂಮಾಲೀಕ ವರ್ಗವನ್ನು ಒಳಗೊಂಡಂತೆ ಕೃಷಿ ಕಾರ್ಮಿಕರಲ್ಲಿಯೂ ಅನೇಕ ಬದಲಾವಣೆಯನ್ನು ತಂದಿತು. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ, ಆಧುನಿಕ ಬೇಸಾಯ ಪದ್ಧತಿ ಮತ್ತು ಯಂತ್ರಗಳ ಮೇಲಿನ ಅವಲಂಬನೆಯಿಂದಾಗಿ ಸಾಕಷ್ಟು ಕೃಷಿ ಕಾರ್ಮಿಕರು ತಮ್ಮ ಕೆಲಸವನ್ನು ಕಳೆದುಕೊಳ್ಳುವಂತಾಯಿತು. ಕೃಷಿಗೆ ಬಳಸಲಾಗುತ್ತಿದ್ದ ಬಂಡವಾಳವು ಕ್ರಮೇಣ ಕೈಗಾರಿಕೆಗಳಲ್ಲಿ ಬಳಕೆಯಾಯಿತು. ಕೃಷಿ ಮತ್ತು ಕೈಗಾರಿಕೆಗಳ ನಡುವಿನ ಸ್ಥಾನಗಳ ವಿಂಗಡನೆಗಳಿಂದಾಗಿ ಸಣ್ಣ ರೈತರು, ಭೂರಹಿತ ಕೂಲಿ ಕಾರ್ಮಿಕರ ಮೇಲೆ ಗಾಢ ಪ್ರಭಾವ ಉಂಟಾಯಿತು. ಸಾಮಾನ್ಯವಾಗಿ ಕೃಷಿ ಕಾರ್ಮಿಕರೆಲ್ಲರೂ ಭೂರಹಿತರಾಗಿರುತ್ತಾರೆ.

ಮಹಿಳೆಯರು ಮನೆ, ಕುಟುಂಬ, ಊರು ಎಂಬ ಭಾವುಕತೆ ಮತ್ತು ಜವಾಬ್ದಾರಿಗಳಿಂದಾಗಿ ಮನೆಯಲ್ಲೇ ಉಳಿಯಬೇಕಾಯಿತು. ಹೊಲ, ಗದ್ದೆ, ಜಮೀನುಗಳಿಂದ ಹೆಣ್ಣು ಮಕ್ಕಳು ತಮ್ಮ ಬಡತನ ತಾಳಲಾರದೇ ಮಾಲೀಕ ಕೊಟ್ಟಷ್ಟು ಕೂಲಿ ಪಡೆದು ಜೀವಿಸುವಂತಾಯಿತು. ಕೌಟುಂಬಿಕ ಜವಾಬ್ದಾರಿ, ಉದ್ಯೋಗದ ಅಭದ್ರತೆಯಿಂದಾಗಿ ಮಾಲೀಕ ಕೈಗೆ ಹಾಕಿದ ಕೂಲಿ ಹಣವನ್ನು ಚಕಾರವೆತ್ತದೇ ಪಡೆದು ಬಾಳತೊಡಗಿದರು. ಸಮಾನ ಕೆಲಸಕ್ಕೆ ಸಮಾನ ಕೂಲಿ, ಹೆಚ್ಚು ಕೂಲಿ ಎಂದೇನಾದರೂ ದನಿ ಎತ್ತಿದರೆ ಇರುವ ಕೆಲಸವನ್ನು ಕಳೆದುಕೊಂಡು ಉಪವಾಸ ಸಾಯುವ ಸ್ಥಿತಿ ಉಂಟಾಯಿತು. ಹೊಸ ಬೇಸಾಯದ ಕ್ರಮಗಳು, ವೈಜ್ಞಾನಿಕ ಕೃಷಿ ವಿಧಾನಗಳು ಮಹಿಳೆಯರ ಕೃಷಿ ಚಟುವಟಿಕೆಗಳಿಗೆ ಧಕ್ಕೆ ತಂದವು. ಇದರಿಂದಾಗಿ ಕರ್ನಾಟಕದಲ್ಲಿ ರೈತರ ಪರ ಹೋರಾಡುವ ಸಲುವಾಗಿ 1938ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷದ ಅಂಗ ಸಂಸ್ಥೆಯಾಗಿ 'ಕಿಸಾನ್ ಸಭಾ' ಜನ್ಮ ತಾಳಿತು. 'ಕರ್ನಾಟಕ ರಾಜ್ಯ ಘಟಕದ ಕಿಸಾನ್ ಸಭೆ' ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ರೈತರ ಪರವಾಗಿ ಹೋರಾಡಲು 'ರೈತ ಸಂಘ' ಎಂಬ ಸಂಘಟನೆಯನ್ನು ಪ್ರಾರಂಭಿಸಿತು.[3]

ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ನಡೆದ ರೈತ ಚಳುವಳಿಗಳಲ್ಲಿ ಕಾಗೋಡು ಸತ್ಯಾಗ್ರಹ ಬಹಳ

[2] ಸುಸಾನ್ ಕೆ.ಪೋಲಿ. (2004). *ಪೆಸಂಟ್ ವಿಮೆನ್. ಇನ್: ವಿಮೆನ್ ಇನ್ ಫ್ರಾನ್ಸ್ ಸಿನ್ಸ್ 1789.* ಪು.ಸಂ. 80–83.

[3] ನಾಗರಾಜ್.ಎಂ.ಜಿನಾಗರಾಜ್.ಎಂ.ಜಿ. (2006) ಪೂರ್ವೋಕ್ತ. ಪು.ಸಂ.11.

ಪ್ರಮುಖವಾದುದು. ಕಾಗೋಡು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ತಾಳಗುಪ್ಪ ಹೋಬಳಿಯಲ್ಲಿರುವ ಒಂದು ಪುಟ್ಟ ಗ್ರಾಮ. ಇಲ್ಲಿ 1950–51ರಲ್ಲಿ ದೀವ ಜಾತಿಗೆ[4] (ಪ್ರವರ್ಗ 2ಎ) ಸೇರಿದ ಗೇಣಿದಾರರು ಅಲ್ಲಿನ ಲಿಂಗಾಯಿತ ಭೂಮಾಲೀಕರ ವಿರುದ್ಧ ನಡೆಸಿದ ಹೋರಾಟವೇ ಕಾಗೋಡು ಸತ್ಯಾಗ್ರಹ.[5] ಕಾಗೋಡಿನಲ್ಲಿ ಊರಿನ ನಾಲ್ಕೈದು ಕುಳಗಳನ್ನು (ಕುಟುಂಬ) ಬಿಟ್ಟರೆ ಉಳಿದವರು ತೀರಾ ಬಡವರು, ಅಶಿಕ್ಷಿತರೂ ಆಗಿದ್ದರು. ದೀವರು ಹಾಗೂ ಇತರರು ಮೇಲ್ಜಾತಿಯ ಭೂಮಾಲೀಕರ ಬಳಿ ಗೇಣಿದಾರರಾಗಿದ್ದರೆ, ದಲಿತ ಜನಾಂಗ ಕೃಷಿ ಕೂಲಿ ಕಾರ್ಮಿಕರಾಗಿದ್ದರು. ಇಲ್ಲಿನ ಭೂಮಾಲೀಕರಲ್ಲಿ ಕೆಲವರು ನೂರಾರು ಎಕರೆ, ಮತ್ತೆ ಕೆಲವರು ಸಾವಿರಾರು ಎಕರೆ ಭೂಮಿಯ ಒಡೆಯರಾಗಿದ್ದರು. ಇವರು ತಮ್ಮೆಲ್ಲಾ ಭೂಮಿಯನ್ನು ತಾವೇ ನೇರವಾಗಿ ಸಾಗುವಳಿ ಮಾಡಲಾರದೆ ಬಡ ರೈತರಾದ ದೀವರಿಗೆ ಕೊಟ್ಟಿದ್ದರು. ಜಮೀನಿನಲ್ಲಿ ಗೇಣಿ ಸಾಮಾನ್ಯವಾಗಿ 1/3 ರಷ್ಟು ಅಥವಾ 1/2 ಭಾಗದಷ್ಟಿತ್ತು. ಗೇಣಿ ಒಕ್ಕಲುಗಳು[6] ದಣಿಗಳಿಗೆ ಗೇಣಿಯಲ್ಲದೆ ಬಿಟ್ಟಿ ಕೆಲಸವನ್ನು ಮಾಡಬೇಕಿತ್ತು. ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ಕಾಗೋಡು ಸತ್ಯಾಗ್ರಹಕ್ಕೆ ಮೂಲ ಕಾರಣ ಗೇಣಿ ಭತ್ತವನ್ನು ಅಳೆಯಲು ಬಳಸುತ್ತಿದ್ದ ಕೊಳಗಕ್ಕೆ ಸಂಬಂಧಿಸಿದ ಸಂಘರ್ಷ.[7] ಸಾಂಪ್ರದಾಯಿಕವಾಗಿ ಅಳತೆಯನ್ನು ಮೂರು ಸೇರಿನ ಕೊಳಗದಲ್ಲಿ ಅಳೆಯಲಾಗುತ್ತಿತ್ತು. ಆದರೆ ಭೂಮಾಲೀಕರು ಮೂರುವರೆಯಿಂದ ನಾಲ್ಕು ಸೇರು ತುಂಬುವಂತಹ ಕೊಳಗವನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ಗೇಣಿಯನ್ನು ವಸೂಲಿ ಮಾಡುತ್ತಿದ್ದರು. ಹೀಗೆ ಲೆಕ್ಕಕ್ಕಿಂತ ಹೆಚ್ಚಿನ ಗೇಣಿಯನ್ನು ವಸೂಲಿ ಮಾಡಿ ಗೇಣಿದಾರರನ್ನು ಶೋಷಿಸುತ್ತಿದ್ದ ಭೂ ಮಾಲೀಕರ ಈ ಮೋಸದ ಕ್ರಮ, ಶೋಷಣೆ ಹಾಗೂ ಸಾಮಾಜಿಕ ತಾರತಮ್ಯವನ್ನು ಖಂಡಿಸಿ ಕಾಗೋಡಿನ ರೈತರ ಜೊತೆಗೆ ರೈತ ಮಹಿಳೆಯರು ಹೋರಾಟ ಆರಂಭಿಸಿದರು.

ಕಾಗೋಡು ರೈತ ಚಳುವಳಿಯ ಪ್ರಮುಖ ರೈತ ಮಹಿಳಾ ಹೋರಾಟಗಾರರು

ಷವಾಜಿ ಮಾಸ್ತ್ಯಮ್ಮನವರು

ಕಾಗೋಡಿನ ಷವಾಜಿ ಕುಟುಂಬದ ಪುಟ್ಟನಾಯ್ಕರಿಗೆ ಇಬ್ಬರು ಗಂಡು ಮಕ್ಕಳು, ಹಿರಿಯರು ಬೀರನಾಯ್ಕರು, ಎರಡನೆಯವರು ಸಣ್ಣಪ್ಪನವರು. ಸಣ್ಣಪ್ಪನವರ ಪತ್ನಿ ಮಾಸ್ತ್ಯಮ್ಮನವರು. ಈ ದಂಪತಿಗಳಿಗೆ ಮಕ್ಕಳಿರಲಿಲ್ಲ. ಕಾಗೋಡು ಸತ್ಯಾಗ್ರಹದ ಸಮಯಕ್ಕೆ ಮಾಸ್ತ್ಯಮ್ಮ ವಿಧವೆಯಾಗಿದ್ದರು. ದೊಡ್ಡ ಕುಟುಂಬವಾಗಿದ್ದ ಷವಾಜಿಯವರ ಮನೆ ಕಾಗೋಡು ಚಳುವಳಿಯ ಚಳುವಟಿಕೆಗಳ ಕೇಂದ್ರವಾಗಿತ್ತು. ಕಾಗೋಡು ಗುರುವೇಗೌಡರ ದರ್ಪ ಮತ್ತು ಗೇಣಿ ಕೊಳಗದ ಸುಲಿಗೆ ಎಲ್ಲ ರೈತರಲ್ಲಿಯು ಅನ್ಯಾಯವೆಂಬ ಭಾವನೆ ಹುಟ್ಟಿಸಿತ್ತು. ರೈತ ಸಂಘ ಮತ್ತು ಸಮಾಜವಾದಿ ಮುಖಂಡರಾಗಿದ್ದ ಗೋಪಾಲಗೌಡರು ಇನ್ನಿತರರ ಪ್ರಭಾವದಿಂದಾಗಿ ಮಾಸ್ತ್ಯಮ್ಮ, ಕೆಂಚನ ಬೀರಮ್ಮ ಮೊದಲಾದವರು ಒಡೆಯರ ಭೂಮಿಯಲ್ಲಿ ಪೋಲೀಸರ ಬಿಗಿ ಬಂದೋಬಸ್ತು ಮತ್ತು ಲಾಠಿ

---

[4] ಕಾವ್ಯಶ್ರೀ.ಕೆ ಮತ್ತು ಡಾ.ಗಂಗಾಧರ ದೈವಜ್ಞ, (2022). ಸೋಸಿಯೋ–ಎಕಾನೊಮಿಕ್ ಸ್ಟೇಟಸ್ ಆ ದಿ ದೀವರು ಕಮ್ಯೂನಿಟಿ ವಿಥ್ ರೆಫರೆನ್ಸ್ ಟು ಶಿವಮೊಗ್ಗ ಡಿಸ್ಟ್ರಿಕ್ಟ್, ಪು.ಸಂ.566-571.

[5] ಚಂದ್ರಶೇಖರ್.ಎಸ್. (2002). *ಆಧುನಿಕ ಕರ್ನಾಟಕದ ಆಂದೋಲನಗಳು.* ಪು.ಸಂ. 137

[6] ವಿಶೇಷತಃ ಕೃಷಿ ಭೂಮಿಯ ಉಪಯೋಗಕ್ಕಾಗಿ, ಅದರ ಒಡೆಯನಿಗೆ ಸಲ್ಲುವ ಪ್ರತಿಫಲ. ಭೂಮಿ ಮತ್ತು ನಿಸರ್ಗದ ಇತರ ನಿರುಪಾಧಿಕ ಕೊಡುಗೆಗಳ ಒಡೆತನದಿಂದ ಪಡೆದ ವರಮಾನ ಎಂಬುದು ಆಲ್ಫ್ರೆ ಮಾರ್ಷಲ್ ನೀಡಿರುವ ವ್ಯಾಖ್ಯೆ. ಬಳಕೆಗಾಗಿ ಭೂಮಿಯನ್ನು ಗುತ್ತಿಗೆಗೆ ಕೊಟ್ಟಿದ್ದಕ್ಕಾಗಿ ಭೂಮಾಲೀಕ ಪಡೆದ ಪರಿಹಾರವೇ ಗೇಣಿ, ಎಂಬುದು ನ್ಯಾಯಶಾಸ್ತ್ರದ ವ್ಯಾಖ್ಯೆ. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ, https://kn.wikisource.org/s/27n

[7] ಬಳ್ಳ್ –ಎಂದರೆ ನಾಲ್ಕು ಸೇರಿನ ಆಳತೆ, ಕೂಳಗ–ಬಳ್ಳ (ಬಳ್ಳ್) ಎಂಬ ಅರ್ಥವನ್ನು ನೀಡುತ್ತದೆ. ನಾಗರಾಜ್.ಎಂ.ಜಿ. (2006) ಪೂರ್ವೋಕ್ತ. ಪು.ಸಂ. 11.

ಏಟುಗಳಿಗೂ ಹೆದರದೆ ಚಳುವಳಿಯಲ್ಲಿ ಭಾಗವಹಿಸಿರುವುದು ಜಯಪ್ಪಗೌಡ. ಡಿ.ಎಸ್ ಅವರ ಲೇಖನದಿಂದ ತಿಳಿದುಕೊಳ್ಳಬಹುದು.[8]

'ಉಳುವವನೇ ಹೊಲದೊಡೆಯ' ಎಂಬ ಸಮಾಜವಾದಿಗಳ ಘೋಷಣೆ, ಈ ರೈತ ಮಹಿಳೆಯರ ಬಾಯಲ್ಲಿ "ಯಾರದು ಭೂಮಿ ನಂದೇ ಭೂಮಿ" ಎಂದು ಮಾರ್ಪಟ್ಟು ಆಗ ಜನಪ್ರಿಯವಾಗಿತ್ತು. ಡಾ.ರಾಮಮನೋಹರ ಲೋಹಿಯಾರವರು ಶ್ರೀಮತಿ ಮಾಸ್ತ್ಯಮ್ಮ ಅವರನ್ನು ತಮ್ಮ ಪಕ್ಷದ ಸಭೆಗಳಲ್ಲಿ ಉದಾಹರಿಸಿದ್ದರು.[9] ಪಕ್ಷದ ಸಂಘಟನೆಯಲ್ಲಿ ಕಾಗೋಡಿನ ಜಟ್ಟಪ್ಪ, ಕೆಂಚಪ್ಪ, ಮಾಸ್ತಿ ಅಂತಹ ರೈತರಿಗೂ ಸ್ಥಾನಮಾನ ದೊರೆಯಬೇಕು ಎಂಬ ತಮ್ಮ ಇರಾದೆಯನ್ನು ಹೇಳುತ್ತಿದ್ದರು. ಗೋಪಾಲಗೌಡರು, ಡಾ.ಲೋಹಿಯಾರವರು ಅವಿದ್ಯಾವಂತ ರೈತ ಮಹಿಳೆಯರ ಮೇಲೂ ತಮ್ಮ ಪ್ರಭಾವವನ್ನು ಬೀರಿದ್ದರು ಎಂಬುದಕ್ಕೆ 1951ರ ಕಾಲಕ್ಕೆ, ಕಾಗೋಡಿನ ಮಹಿಳೆಯರು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿರುವುದೇ ಸಾಕ್ಷಿ ಎಂದಿದ್ದಾರೆ.[10]

ಬಿಳಿಯನ ಸಾವಿತ್ರಮ್ಮ

"ಗಣಪತಿಯಪ್ಪನವರ ಕರೆಯಂತೆ ಕಾಗೋಡು ಸತ್ಯಾಗ್ರಹಕ್ಕೆ ಭಾಗವಹಿಸಿದೆ, ಹಾಗೇ ಹೋದ ನಮ್ಮನ್ನೆಲ್ಲಾ ಪೋಲೀಸರು ಬಂಧಿಸಿ ಕರೆದೊಯ್ದರು. ಆದರೆ ಹೆಂಗಸರನ್ನು ಯಡದಾರಿ (ಮಧ್ಯದಾರಿಯಲ್ಲಿಯೇ)ಯಲ್ಲಿಯೇ ಬಿಟ್ಟುಬಿಟ್ಟರು. ನಂತರ ನಮ್ಮನ್ನು ಕೋರ್ಟಿಗೆ ಕರೆಸಿದರು. ಮೂರಾಲ್ಕು ತಿಂಗಳುಗಳ ಕಾಲ ಕೋರ್ಟ್ ಹಿಯರಿಂಗ್‌ಗಳಿಗೆ ಹಾಜರಾದೆ. ನಂತರದಲ್ಲಿ ವಕೀಲರನ್ನಿಟ್ಟು ಕೇಸನ್ನು ವಜಾ ಆಗುವಂತೆ ಮಾಡಲಾಯಿತು" ಎಂಬುದು ಬಿಳಿಯನ ಸಾವಿತ್ರಮ್ಮನ ಕಾಗೋಡು ಸತ್ಯಾಗ್ರಹದ ಅನುಭವದ ಮಾತು ಮತ್ತು ಇವರಿಗೆ ಎರಡು ಗಂಡು ಹಾಗೂ ಮೂರು ಹೆಣ್ಣು ಮಕ್ಕಳಿದ್ದಾರೆ ಎಂದು ಡಾ.ಹಿ.ಚಿ.ಬೋರಲಿಂಗಯ್ಯ ಅವರು ತಿಳಿಸಿದ್ದಾರೆ. ಇವರು ಕೂಡ ನಾಲ್ಕು ಸೇರಿನ ಕೊಳಗದಲ್ಲಿಯೇ ಗೇಣಿ ಭತ್ತವನ್ನು ಅಳೆಸುತ್ತಿದ್ದರು ಎಂಬುದನ್ನು ಒತ್ತಿ ಹೇಳುತ್ತಾರೆ. ಸತ್ಯಾಗ್ರಹದ ಕಾಲಕ್ಕೆ ಇವರ ವಿವಾಹವಾಗಿರಲಿಲ್ಲ. ಸತ್ಯಾಗ್ರಹದ ಮಾರನೆಯ ವರ್ಷ ಇವರ ವಿವಾಹವಾಯಿತು. ತಂದೆಯ ಮನೆಯ ಜಮೀನು ಮೂರು ಎಕರೆ ಇದ್ದಿತು. ಅದು ಗೇಣಿಯ ಜಮೀನು, ತಂದೆಯ ಹೆಸರು ಬಿಳಿಯನ ಕನ್ನಪ್ಪ, ಇವರು ಒಡೆಯರ ಮನೆಯ ತೋಟಕ್ಕೆ ಆಳು ಹೋಗುತ್ತಿದ್ದರು. ಒಡೆಯರು ತಮ್ಮಿಂದ ಕಾನು ಕಂದಾಯವೆಂದು ವಸೂಲು ಮಾಡುತ್ತಿದ್ದರು, 'ಸಲಿಗೆ' ಭತ್ತ ವಸೂಲು ಮಾಡುತ್ತಿದ್ದರು ಎನ್ನುವುದು ವಿವರಣೆ. ಆಗಿನ ಕಾಲದಲ್ಲಿ ಸವಾಜಿಯವರು, ವಕೀಲಿನ ಮನೆಯವರು ಹಾಗೂ ಗಿರಿಯನ ಮನೆಯವರು ಅವರ ಕೇರಿಯಲ್ಲಿ ಸ್ವಲ್ಪ ಮಟ್ಟಿನ ಗಟ್ಟಿಕುಳಗಳಾಗಿದ್ದರು. ಗೇಣಿ ಭತ್ತವನ್ನು ಒಡೆಯರ ಮನೆಯ ಪಳತನ ಮನೆಗೆ ತುಂಬಿಬರಲು ಗಂಡಾಳಿನೊಂದಿಗೆ ಸಹಾಯಕ್ಕೆ ಹೆಣ್ಣಾಳುಗಳು ಹೋಗಬೇಕಾಗಿತ್ತು. ಕೋರ್ಟಿನಲ್ಲಿ ಬಿಡುಗಡೆಯಾಗುವಾಗ, ಸಾಗರದಲ್ಲಿ ಅಂಗಡಿ ಇಟ್ಟಿದ್ದರು. ಗುತ್ಯಪ್ಪ ಎಂಬುವವರು ನಮ್ಮ ಪರವಾಗಿ ಬಂದು ಸಾಕ್ಷ್ಯ ಹೇಳಿದ್ದರು ಎಂದು ನೆನಪು ಮಾಡಿಕೊಂಡಿದ್ದಾರೆ ಎಂದು ಡಾ.ಹಿ.ಚಿ. ಬೋರಲಿಂಗಯ್ಯ ಅವರ ಅಧ್ಯಯನದಿಂದ ತಿಳಿಯಬಹುದು.[11]

---

[8] ಜಯಪ್ಪಗೌಡ.ಡಿ.ಎಸ್. (2011). *ಸಮಾಜವಾದಿ ಶಾಂತವೇರಿ ಗೋಪಾಲಗೌಡ.* ಪು.ಸಂ. 12

[9] ಮುಜಾಫರ್ ಅಸ್ಸಾದಿ. (2009). *ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ: ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿಗಳು.* ಪು.ಸಂ. 68.

[10] ಬೋರಲಿಂಗಯ್ಯ ಹಿ.ಚಿ. ಎನ್.ಹುಚ್ಚಪ್ಪ ಮಾಸ್ತರ. (2002). ಕಾಗೋಡು ಚಳವಳಿ. ಪು.ಸಂ.176.

[11] ಬೋರಲಿಂಗಯ್ಯ ಹಿ.ಚಿ. ಎನ್.ಹುಚ್ಚಪ್ಪ ಮಾಸ್ತರ. (2002). ಪೂರ್ವೋಕ್ತ.226.

ಕೋಣೆ ಕನ್ನಮ್ಮ

ಮೂರೂವರೆ ಎಕರೆ ಗೇಣಿ ಜಮೀನಿನಲ್ಲಿ ಹುಲ್ಲು ಮಾಡಿನ ಮನೆಯಲ್ಲಿ ಗಂಡನೊಂದಿಗೆ ವಾಸವಾಗಿದ್ದ ಕೋಣೆ ಕನ್ನಮ್ಮ. ಊರಿನ ಹಿರಿಯರಾದ ಗೋಪಾಲಗೌಡರು, ಗಣಪತಿಯಪ್ಪನವರು ಮತ್ತು ಲೋಹಿಯಾರವರ ಪ್ರೇರಣೆಯೊಂದಿಗೆ ಸತ್ಯಾಗ್ರಹಕ್ಕೆ ಇಳಿದಿದ್ದೆ ಎಂದು ಹೇಳುವ ಕೋಣೆ ಕನ್ನಮ್ಮನವರು. ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾಗಿ ಪೋಲೀಸರಿಂದ ಬಂಧನಕ್ಕೆ ಒಳಗಾದವರು. ಆದರೆ ಇವರನ್ನು ಜೈಲಿಗೆ ಹಾಕಲಿಲ್ಲ. ಬದಲಿಗೆ ಸ್ವಲ್ಪ ದೂರ ಒಯ್ದು ಪೋಲೀಸರು ಇವರನ್ನು ಬಿಟ್ಟು ಬಿಟ್ಟರು. ನಾಲ್ಕು ಸೇರಿನ ತಾಮ್ರದ ಕೊಳಗದಲ್ಲಿ ಇಲ್ಲಿನ ಗೌಡರು ಗೇಣಿ ಭತ್ತ ಅಳೆಯಿಸಿಕೊಳ್ಳುತ್ತಿದ್ದರು ಎಂಬುದನ್ನು ಕೋಣೆ ಕನ್ನಮ್ಮ ಒತ್ತಿ ಹೇಳುತ್ತಾರೆ. ಸತ್ಯಾಗ್ರಹಕ್ಕೆ ಬರಬೇಕೆಂದು ಹೆಂಗಸರನ್ನು ಕೂಡ ಮುಖಂಡರು ಕರೆದಾಗ ಹಿಂದೆ ಮುಂದೆ ಆಲೋಚಿಸಿದೆ ಮಂಕರಿ ಹೊತ್ತು ಕನ್ನಮ್ಮ ಗದ್ದೆಗೆ ಸಾಗಿದ್ದರು. ಕನ್ನಮ್ಮನನ್ನು ಅಲ್ಲಿ ಉಳುಮೆ ಕೆಲಸಕ್ಕೆ ಇಳಿದಿದ್ದ ಗಂಡಸರೊಂದಿಗೆ ಬಂಧಿಸಿದ್ದ ನಂತರ ದೂರ ಒಯ್ದು ಬಿಡುಗಡೆ ಮಾಡಿದ್ದನ್ನು ನೆನೆಯುತ್ತಾರೆ. ನಮ್ಮನ್ನು ಭೂಮಾಲೀಕರು ತಮ್ಮ ಮನೆ ಬಳಕೆಗೆ ಬೇಕಾಗುವ ಅಕ್ಕಿ ತಯಾರಿಸಲು, ಭತ್ತ ಕುಟ್ಟುವ ಕೆಲಸಕ್ಕೆ ಕರೆಯಿಸಿಕೊಳ್ಳುತಿದ್ದರು. ಅದಕ್ಕೆ ಕೂಲಿ ಕೊಟ್ಟರೆ ಕೊಟ್ಟರು, ಇಲ್ಲದಿದ್ದರೆ ಇಲ್ಲವೆಂದು ತಿಳಿಸುತ್ತಾರೆ. ಆಗಿನ ಮೂರೂವರೆ ಎಕರೆ ಜಮೀನಿನಲ್ಲಿ ಗಂಡ ಹೆಂಡತಿ ದುಡಿದರೂ ಅದು ಜೀವನಕ್ಕೆ ಸಾಲುತ್ತಿರಲಿಲ್ಲ, ಮತ್ತೆ ಕೂಲಿಗೆ ಹೋಗುತ್ತಿದ್ದೆವು ಎಂದು ಹೇಳುವ ಇವರು ವರ್ಷಕ್ಕೆ ಬರೀ ಎರಡು ಜೊತೆ ಬಟ್ಟೆ ಮಾತ್ರ ಹೊಲಿಸುತ್ತಿದ್ದೆವು ಎನ್ನುತ್ತಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳಿದ್ದಾರೆ. ಮೂರೂವರೆ ಎಕರೆ ಜಮೀನು ಇದೆ. ಒಬ್ಬ ಮಗಳಿಗೆ ಮದುವೆ ಮಾಡಿ ಅಳಿಯನನ್ನು ಮನೆಯಲ್ಲಿ ಇಟ್ಟುಕೊಂಡು ನೆಮ್ಮದಿಯಿಂದ ಜೀವನ ಸಾಗುತ್ತಿದೆ. ಸತ್ಯಾಗ್ರಹದ ಸಮಯದಲ್ಲಿ ಪೋಲೀಸರು ಊರಿನ ಮನೆ ಮನೆಗೆ ನುಗ್ಗಿ ಗಂಡಸರನ್ನು ಸಿಕ್ಕಾಪಟ್ಟೆ ಥಳಿಸಿದ್ದರು, ನನ್ನ ಗಂಡನನ್ನು ಜೈಲಿಗೆ ಹಾಕಿದ್ದರು ಎಂದು ಕನ್ನಮ್ಮ ಆವೇಶದಿಂದ ನೆನೆಯುತ್ತಾರೆ. ಹಾಗೆಯೇ ಹೆಣ್ಣು ಮಕ್ಕಳಿಗೆ ಪೋಲೀಸರಿಂದಾಗಲೀ, ಸರ್ಕಾರಿ ಅಧಿಕಾರಿಗಳಿಂದಾಗಲೀ ತೊಂದರೆಯಾಗಲಿಲ್ಲವೆಂದು ಸಮಾಧಾನ ವ್ಯಕ್ತಪಡಿಸಿರುವುದನ್ನು ಎನ್.ಹುಚ್ಚಪ್ಪ ಮಾಸ್ತರ "ಕಾಗೋಡು ಚಳವಳಿ" ಪುಸ್ತಕದಲ್ಲಿ ವಿವರಿಸಿದ್ದಾರೆ.[12]

ಮಡಿವಾಳ ಕನ್ನಮ್ಮ

ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾದ ಹೆಣ್ಣುಮಕ್ಕಳಲ್ಲಿ ಕನ್ನಮ್ಮನವರೂ ಒಬ್ಬರು. ಇವರನ್ನು ಪೋಲಿಸರು ಬಂಧಿಸಿದರೂ ಜೈಲಿಗೆ ಹಾಕಲಿಲ್ಲ. ಇವರಿಂದ ಮುಚ್ಚಳಿಕೆ ಹೇಳಿಕೆ ತೆಗೆದುಕೊಂಡು ಅಲ್ಲಿಂದಲ್ಲಿಗೆ ಬಿಟ್ಟು ಕಳಿಸಿದರು. ಇವರು ಊರಿನ ಗಣಪತಿಯಪ್ಪನವರ, ಸವಾಜಿಯವರ ಮಾತಿನಂತೆ ಸತ್ಯಾಗ್ರಹಕ್ಕೆ ಇಳಿದಿದ್ದರು. ಗೌಡರೂ ಬೇರೆ ಭೂಮಿಗೆ ಕಾಲಿಡಬೇಡಿ ಎಂದು ಹೇಳುತ್ತಿದ್ದರು. ಹೊಟ್ಟೆಗಿಲ್ಲದ ಅವರಿಗೆ ಭೂಮಿ ಉಳುಮೆ ಮಾಡಿ ಬೀಜ ಬಿತ್ತುವುದು ಅನಿವಾರ್ಯವಾಗಿತ್ತು. ಹಾಗಾಗಿ ಗದ್ದೆಗೆ ಹೋಗಲೇಬೇಕೆಂಬ ಅನಿವಾರ್ಯ ಅವರಿಗಿದ್ದುದರಿಂದ ಗದ್ದೆಗೆ ಬಲವಂತವಾಗಿ ಹೋಗುತ್ತಿದ್ದರು. ಅಲ್ಲಿ ಅವರನ್ನು ಬಂಧಿಸಿ ಸ್ವಲ್ಪ ದೂರ ಒಯ್ದು ಬಿಟ್ಟರು. ಹೀಗೆ ಅಂದಿನ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಗೌಡರ ಗೇಣಿ ಗದ್ದೆ ಮಾಡಿದರೂ, ಗೇಣಿ ಭತ್ತಕೊಟ್ಟು ಉಳಿದ ಭತ್ತ ಜೀವನಕ್ಕೆ ಸಾಕಾಗದೆ ಕೂಲಿ ನಾಲಿ ಮಾಡಿ ಜೀವನಕ್ಕೆ ಮಾಡಿಕೊಳ್ಳುತ್ತಿದ್ದೆವು ಎಂದು ನೆನಪಿಸಿಕೊಳ್ಳುತ್ತಾರೆ ಎಂದು ಡಾ.ಹಿ.ಚಿ.ಬೋರಲಿಂಗಯ್ಯ ಅವರು ವಿವರಿಸಿದ್ದಾರೆ.[13]

ಬರ್ಸಿನ ಚೌಡಮ್ಮ

ಹಿರೇನೆಲ್ಲೂರಿನ ಬರ್ಸಿನ ಕನ್ನಪ್ಪನವರ ಪತ್ನಿಯವರಾಗಿದ್ದ ಶ್ರೀಮತಿ ಚೌಡಮ್ಮನವರು

---

[12] ಅದೇ. ಪು.ಸಂ.227–228.

[13] ಅದೇ. ಪು.ಸಂ.232.

ಕಾಗೋಡು ಚಳುವಳಿಯಲ್ಲಿ ಭಾಗಿಯಾಗಿದ್ದವರು. ಬಂಧನಕ್ಕೆ ಒಳಪಟ್ಟಿದ್ದರೂ ಜೈಲಿಗೆ ಹಾಕಲಿಲ್ಲ. ಇವರಿಗೆ ಐದೂವರೆ ಎಕರೆ ಸ್ವಂತ ಜಮೀನಿತ್ತು. ಇವರ ಒಬ್ಬಳೇ ಮಗಳಾದ ಮಂಜಮ್ಮನವರನ್ನೂ ಕಾಗೋಡು ಸತ್ಯಾಗ್ರಹದ ಪ್ರಮುಖರಲ್ಲೊಬ್ಬರಾಗಿದ್ದ ಹೆಚ್.ಗಣಪತಿಯಪ್ಪನವರಿಗೆ ಕೊಟ್ಟು ಮದುವೆ ಮಾಡಿದ್ದರಿಂದ, ಅಳಿಯನನ್ನು ಕಾಣುವ ತವಕದಿಂದಲೂ ಚೌಡಮ್ಮನವರು ಸತ್ಯಾಗ್ರಹಕ್ಕೆ ಬಂದಿದ್ದರು.[14] ರೈತರ ಪರವಾಗಿ ಹೋರಾಡುವ ಬಯಕೆಯೂ ಅಳಿಯನಿಗೆ ಬೆಂಬಲವಾಗಿ ಇವರಿಗಿತ್ತು.[15]

ಕೆಂಚನ ಬೀರಮ್ಮ ಮತ್ತು ಕೆಂಚಪ್ಪ

"ಯಾರದು ಭೂಮಿ, ನಮ್ಮದು ಭೂಮಿ" ಎಂಬ ಘೋಷಣೆಯೊಂದಿಗೆ ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾದ ಗಟ್ಟಿಗಿತ್ತಿ ಹೆಣ್ಣು ಮಗಳು ಕೆಂಚನ ಬೀರಮ್ಮ. ಇವರ ಮನೆತನದ ಹೆಸರು ಕೆಂಚನವರ ಮನೆ ಎಂದು. ಇವರ ಗಂಡನ ಹೆಸರೂ ಕೆಂಚಪ್ಪ ಎಂಬುದೇ ಆಗಿತ್ತು. ಕಾಗೋಡು ಸತ್ಯಾಗ್ರಹದಲ್ಲಿ ಗಂಡ ಹೆಂಡತಿ ಇಬ್ಬರೂ ಭಾಗಿಯಾಗಿದ್ದರು. ಆದರೆ ಕೆಂಚಪ್ಪನವರಿಗೆ ನಾಲ್ಕು ತಿಂಗಳು ಕಾಲ ಜೈಲಿಗೆ ಹಾಕಿದ್ದರು. ಬೀರಮ್ಮನವರನ್ನು ಹಾಗೆಯೇ ಬಿಟ್ಟಿದ್ದರು. ಕೆಂಚಪ್ಪನವರಿಗೆ ಇಬ್ಬರು ಹೆಂಡತಿಯರು. ಹಿರಿಯ ಹೆಂಡತಿಯಾದ ಬೀರಮ್ಮನವರಿಗೆ ಮಕ್ಕಳಿಲ್ಲದ ಪ್ರಯುಕ್ತ ಎರಡನೆಯ ವಿವಾಹವಾಗಿದ್ದರು. ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾಗಿ ಜೈಲಿಗೆ ಹೋಗಿ ಬಂದ ನಂತರ ಈ ದಂಪತಿಗಳಿಬ್ಬರು, ನಾವು ಯಾವುದೇ ಕಾರಣಕ್ಕೂ ಗೌಡರ ಜಮೀನು ಮಾಡುವುದಿಲ್ಲವೆಂದು ಶಪಥ ತೊಟ್ಟು ಹಾಗೆಯೇ ಬದುಕವವರಿದ್ದರು. ಹೀಗೆ ಕೆಲಕಾಲ ಬಾಳಿದ ಕೆಂಚಪ್ಪನವರು ಎರಡನೆಯ ಹೆಂಡತಿಯ ಒತ್ತಾಯಕ್ಕೆ ಮಣಿದರು. ಹಾಗೂ ತಮ್ಮ ಎರಡನೆಯ ಹೆಂಡತಿಯು ಕಾಗೋಡುಗೌಡರ ಮನೆಗೆ ಹೋಗಿ ಮೂರು ಎಕರೆ ಜಮೀನು ಗೇಣಿಗೆ ಪಡೆದು ಬಂದ ನಂತರ ಅದರಲ್ಲೇ ದುಡಿಮೆ ಮಾಡಿ ಬದುಕು ಸಾಗಿಸಿದರು. ಆದರೆ ಈಗ ಕೆಂಚನ ಬೀರಮ್ಮನಾಗಲಿ, ಕೆಂಚಪ್ಪನವರಾಗಲಿ ಬದುಕಿಲ್ಲ. ಆದರೆ ಅವರು ಉದ್ಘೋಷಿಸಿದ 'ಯಾರದು ಭೂಮಿ, ನಮ್ಮದು ಭೂಮಿ' ಎಂಬ ಘೋಷಣೆ ಮಾತ್ರ ಸಾಕಾರಗೊಂಡು ಮೈದಾಳಿ ನಿಂತಿದೆ ಎಂದು ಎನ್.ಹುಚ್ಚಪ್ಪ ಮಾಸ್ತರ "ಕಾಗೋಡು ಚಳವಳಿ" ಪುಸ್ತಕದಲ್ಲಿ ವಿವರಿಸಿದ್ದಾರೆ.[16]

ರೊಡ್ಡಿ ದೇವಮ್ಮ (ತಡಗಳಲೆ)

ಬಿ.ಚೆನ್ನಬಸಪ್ಪಗೌಡ ಎಂಬ ಭೂಮಾಲೀಕರು ತಮ್ಮ ದಾಯಾದಿ ವಿಧವೆಯೊಬ್ಬಳ ಜಮೀನನ್ನು ಬೇರಾರು ಮಾಡದೆ, ಅದು ಹಾಳು ಬೀಳಬೇಕೆಂದೂ, ಕ್ರಮೇಣ ಅದು ತನ್ನದಾಗಬೇಕೆಂದೂ ಬಯಸಿದ್ದರು. ಆದರೆ ಆ ವಿಧವೆಯ ಜಮೀನು ಮಾಡುತ್ತಿದ್ದ ಕಿಲಾರದವರ ದಬ್ಬಯಾನೆ ರೊಡ್ಡಿ ಚೌಡಪ್ಪನಾಗಲೀ, ಆಕೆಯ ಇತರೆ ಗೇಣಿದಾರರಾಗಲೀ, ಅವರ ಆಮಿಷಕ್ಕೆ ತಲೆತೂಗಲಿಲ್ಲ. ಆಗ ಇವರು ಉಳುಮೆ ಮಾಡುತ್ತಿದ್ದ ಭೂಮಿಗೆ ನುಗ್ಗಿ ಇವರ ನೇಗಿಲು, ನೊಗಗಳನ್ನು ಕಡಿದು ಹಾಕಿದರು. ಆ ರೀತಿ ದಾಯಾದಿಯ ಹೊಟ್ಟೆಕಿಚ್ಚಿಗೆ ಒಳಗಾಗಿ ತೊಂದರೆಗೆ ಒಳಗಾದ ಗೌಡತಿಯ ಹೆಸರು ತೋಟದ ಮನೆ ಬಂಗಾರಮ್ಮ ಎಂದು. ಒಟ್ಟು ಐದು ಎಕರೆ ಗೇಣಿ ಹೊಂದಿದ್ದ ಚೌಡಪ್ಪನ ಕುಟುಂಬ ಆಗ ಮೂರು ಜನರಿಂದ ಕೂಡಿತ್ತು. "ಮನೆ ಅಳಿಯ"ತನಕ್ಕೆ ಬಂದಿದ್ದ ಚೌಡಪ್ಪನವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಗಳಾದರೂ ಜೈಲು ಶಿಕ್ಷೆಗೆ ಒಳಗಾಗಲಿಲ್ಲ.[17]

ಉಪಸಂಹಾರ

ಭಾರತದ ಇತಿಹಾಸದಲ್ಲಿ ಮಹಿಳೆಯ ಸ್ಥಿತಿ ಸುಧಾರಿಸಲು ಹೋರಾಡಿದ ಮಹನೀಯರಾದಂಥ ರಾಜಾರಾಮ ಮೋಹನರಾಯ್, ಈಶ್ವರಚಂದ್ರ

[14] ಬೋರಲಿಂಗಯ್ಯ ಹಿ.ಚಿ. ಮತ್ತು ಎನ್.ಹುಚ್ಚಪ್ಪ ಮಾಸ್ತರ. (2002). ಪೂರ್ವೋಕ್ತ ಪು.ಸಂ.67.

[15] ಅದೇ. 232–233.

[16] ಅದೇ. 233–234.

[17] ಅದೇ. 243.

ವಿದ್ಯಾಸಾಗರ, ಸುಬ್ರಹ್ಮಣ್ಯಭಾರತಿ, ಶರತ್‌ಚಂದ್ರ ಚಟರ್ಜಿ, ಜ್ಯೋತಿಬಾಪುಲೆ, ಡಾ.ಬಿ.ಆರ್.ಅಂಬೇಡ್ಕರ್ ಇನ್ನು ಅನೇಕರನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಇವರ ಹೋರಾಟದಿಂದ ಮಹಿಳೆಯರಿಗೆ ಶಿಕ್ಷಣ, ಉದ್ಯೋಗದ ಅವಕಾಶ ದೊರೆಯಿತಲ್ಲದೆ ಬಾಲ್ಯವಿವಾಹ ಕಾನೂನು ತಡೆ, ವಿಧವೆಯರಿಗೆ ಮರುಮದುವೆಗೆ ಅವಕಾಶ, ಇನ್ನು ಅನೇಕ ಸಾಮಾಜಿಕ ಸಂಕಟಗಳಿಗೆ ಪರಿಹಾರ ದೊರೆತಿದೆ. ಗ್ರಾಮೀಣ ಮಹಿಳೆಯು ತನ್ನ ಮೂಲಭೂತ ಅವಶ್ಯಕತೆಗಳಿಗಾಗಿ ಹೋರಾಟ ನಡೆಸುವ ಹಂತ ತಲುಪಿದ್ದಾಳೆ. ಇದಲ್ಲದೆ ಸರಕಾರದ ಜಾಗತೀಕರಣ, ಖಾಸಗೀಕರಣದ ನೀತಿಗಳಿಂದ ಪರಿಸರದ ವಿನಾಶಕ್ಕೆ ಸಂಬಂಧಪಟ್ಟಂತೆ ಗಣಿಗಾರಿಕೆ, ಅಣೆಕಟ್ಟುನಿರ್ಮಾಣ, ಉದ್ದಿಮೆಗಳ ಸ್ಥಾಪನೆ ಮುಂತಾದ ಉದ್ದೇಶಗಳಿಗೆ ಭೂಮಿ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಒದಗಿದೆ. ಇಂತಹ ಸಂದರ್ಭದಲ್ಲಿ ಭೂಮಿ ಕಳೆದುಕೊಂಡ ರೈತ ಮಹಿಳೆಯರು ಸಂಘಟಿತರಾಗಿ ಹೋರಾಟ ನಡೆಸಿದ್ದಾರೆ. ಹಾಗೆಯೇ ಅಲ್ಲಲ್ಲಿ ಸರ್ಕಾರದ, ಸಂಘಸಂಸ್ಥೆಗಳ ತರಬೇತಿಗಳಲ್ಲಿ ಭಾಗವಹಿಸಿ ತನ್ನ ವೃತ್ತಿಗೆ ಸಂಬಂಧಿಸಿದ ಮಾಹಿತಿ ಪಡೆದು ಬದುಕನ್ನು ಹಸನು ಮಾಡಿಕೊಂಡು ಸಾರ್ಥಕತೆ ಕಾಣುತ್ತಿದ್ದಾರೆ. ರೈತರ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಡುವ ರೈತರ ಸಂಘಟನೆಗಳಲ್ಲಿಯೂ ರೈತ ಮಹಿಳೆಯರು ಕೈ ಜೋಡಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಈ ಸಮಸ್ಯೆಗಳು ಇಡೀ ದೇಶದ ಸಮಸ್ಯೆಯೇ ಆಗಿದೆ. ಬದಲಾದ ವಾತಾವರಣದಲ್ಲಿ ಜಾಗತೀಕರಣದ ಅಡ್ಡ ಪರಿಣಾಮಗಳಲ್ಲಿ ಈ ಪರಿಸ್ಥಿತಿ ಎಲ್ಲರಿಗೂ ಒದಗಿದೆ ಎಂಬುವುದರಲ್ಲಿ ಸುಳ್ಳು ಇಲ್ಲ. ಅದರೂ ರೈತಾಪಿ ವರ್ಗದ ಬದುಕು ಹಸನಾದರೆ ರೈತರ ಮತ್ತು ಗ್ರಾಮೀಣ ಮಹಿಳೆಯರ ಬದುಕು ಹಸನಾಗುತ್ತದೆ. ರೈತ ಮಹಿಳೆಗೆ ಶಿಕ್ಷಣ ಮತ್ತು ತರಬೇತಿ ಇವೆಲ್ಲವುಗಳಿಂದ ಭಾರತದ ಗ್ರಾಮಗಳೆಲ್ಲವೂ ಸ್ವಾವಲಂಬಿ ಗ್ರಾಮಗಳಾಗಿ ಸ್ವರಾಜ್ಯ ಸ್ಥಾಪನೆ ಆಗಬೇಕಿದೆ. ತನ್ಮೂಲಕ ಗ್ರಾಮೀಣ ಸ್ವರಾಜ್ಯದಿಂದ ಗ್ರಾಮ ಮಹಿಳೆಯ ಆರ್ಥಾತ್ ರೈತ ಮಹಿಳೆಯ ಬದುಕು ಅರ್ಥಪೂರ್ಣವಾಗಬೇಕಾಗಿದೆ.

ಪರಾಮರ್ಶನ ಗ್ರಂಥಗಳು

- ಬಸವರಾಜು.ಜಿ.ಪಿ. (20180. *ಕಾಗೋಡು ಭೂ ಹೋರಾಟದ ಹಿನ್ನೋಟ.* ಕನ್ನಡ ಪುಸ್ತಕ ಪ್ರಾಧಿಕಾರ.
- ಬೋರಲಿಂಗಯ್ಯ, ಹಿ.ಚಿ. ಮತ್ತು ಎನ್. ಹುಚ್ಚಪ್ಪ ಮಾಸ್ತರ. (2002). *ಕಾಗೋಡು ಚಳವಳಿ. ಮಲೆನಾಡು ಜಾನಪದ ಲೋಕ.*
- ಚಂದ್ರಶೇಖರ್.ಎಸ್. (2002). *ಆಧುನಿಕ ಕರ್ನಾಟಕದ ಆಂದೋಲನಗಳು.* ನಮ್ಮ ಪ್ರಕಾಶನ.
- ಗಿರೀಶ್ ತಾಳಿಕಟ್ಟೆ ಮತ್ತು ಕೆ.ಎಲ್.ಆಶೋಕ್. (2022). *ಹೆಚ್.ಆರ್.ಬಸವರಾಜಪ್ಪನವರ ಹಸಿರು ಹಾದಿಯ ಕಥನ.* ಗೌರಿ ಮೀಡಿಯಾ ಟ್ರಸ್ಟ್.
- ಜಯಪ್ಪಗೌಡ ಡಿ. ಎಸ್. (2011). *ಸಮಾಜವಾದಿ ಶಾಂತವೇರಿ ಗೋಪಾಲಗೌಡ.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- ಕವಂಟೆ ಎಸ್.ಎಚ್. ಮತ್ತು ವಿ.ಜಿ.ಪೂಜಾರ್. (2000). *ಶ್ರೀ ಕಡಿದಾಳ್ ಮಂಜಪ್ಪ.* ಕರ್ನಾಟಕದ ವಿಧಾನ ಮಂಡಲದ ಗ್ರಂಥಾಲಯ ಸಮಿತಿ.
- ಕಾವ್ಯಶ್ರೀ.ಕೆ ಮತ್ತು ಡಾ.ಗಂಗಾಧರ ದೈವಜ್ಞ, (2022). ಸೋಸಿಯೋ–ಎಕಾನೊಮಿಕ್ ಸ್ಟೇಟಸ್ ಆ ದಿ ದೀವರು ಕಮ್ಯೂನಿಟಿ ವಿಥ್ ರೆಫರೆನ್ಸ್ ಟು ಶಿವಮೊಗ್ಗ ಡಿಸ್ಟ್ರಿಕ್ಟ್, ಕರ್ನಾಟಕ. *ಇಂಟರ್ನ್ಯಾಷನಲ್ ಜರ್ನಲ್ ಆಫ್ ಕ್ರಿಯೇಟಿವ್ ರಿಸರ್ಚ್ ಥಾಟ್ಸ್.* www.ijcrt.org, 10(4), ಪು.ಸಂ.566-571.
- ಕೋಣಂದೂರು ವೆಂಕಪ್ಪಗೌಡ. (2001). ಕಾಗೋಡು ರೈತ ಹೋರಾಟದ ರೂವಾರಿ ಹೆಚ್. ಗಣಪತಿಯಪ್ಪನವರ ಜೀವನ ಚರಿತ್ರೆ. ಯಶಸ್ವಿ ಪ್ರಕಾಶನ.
- ಮುಜಾಫರ್ ಅಸ್ಸಾದಿ. (2009). *ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ: ರೈತ, ರೈತ ಹೋರಾಟ*

ಹಾಗೂ ಸಾಮಾಜಿಕ ಚಳುವಳಿಗಳು. ಡಾ. ಬೈರೇಗೌಡ ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

- ನಾಗರಾಜ್.ಎಂ.ಜಿ. (2006). *ಕರ್ನಾಟಕ ರೈತ ಚಳುವಳಿಗಳು–ಸತ್ಯಾಗ್ರಹಗಳು.* ಕರ್ನಾಟಕದ ವಿಧಾನ ಮಂಡಲದ ಗ್ರಂಥಾಲಯ ಸಮಿತಿ.
- ರಾಜಶೇಖರ್ ಜಿ. (1980). *ಕಾಗೋಡು ಸತ್ಯಾಗ್ರಹ.* ಅಕ್ಷರ ಪ್ರಕಾಶನ.
- ರಾಜಶೇಖರ.ಜಿ. (2017). *ಭೂಮಿಗಾಗಿ ಹೋರಾಟ:ಕಾಗೋಡು ಕಥನ.* ಸಂಪುಟ–4, ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸುಸಾನ್ ಕೆ.ಫೋಲಿ. (2004). *ಪೆಸಂಟ್ ವಿಮೆನ್. ಇನ್: ವಿಮೆನ್ ಇನ್ ಫ್ರಾನ್ಸ್ ಸಿನ್ಸ್ 1789.* ಯುರೋಪಿಯನ್ ಸ್ಟಡೀಸ್ ಸೀರೀಸ್, ಲಂಡನ್, ಪು.ಸಂ. 80–83. https://doi.org/10.1007/978-0-230-80214-8_4